



ಭಾರತದ ಹಾಕಿಗೆ ಸ್ಪರ್ಧಾತ್ಮಕ ಆಯಾಮ ತಂದುಕೊಟ್ಟ ಧನರಾಜ ಪಿಳ್ಳೆ




# ಅವಕಾಶವಾದಿ ಫಾರ್ವರ್ಡ್ ಆಟಗಾರರು...

ಸುಬ್ಬಯ್ಯ ಸಂದರ್ಶನ

ಎ.ಬಿ. ಸುಬ್ಬಯ್ಯ ಹನ್ನೆರಡು ವರ್ಷ ಹಾಕಿ ಆಡಿ ಭಾರತೀಯ ಕ್ರೀಡಾರಂಗಕ್ಕೆ ಅಪೂರ್ವ ಕೊಡುಗೆ ನೀಡಿದವರು. 1994ರಲ್ಲಿ ಸಿಡ್ನಿ ಒಲಿಂಪಿಕ್ಸ್ ನಡೆದಾಗ ಅರ್ಜೆಂಟಿನಾ ತಂಡದ ಗೋಲು ಗಳಿಸುವ ಅವಕಾಶಕ್ಕೆ ತಡೆಯೊಡ್ಡಿ ಅವರು ಸುದ್ದಿಯಾಗಿದ್ದರು. 12 ವರ್ಷಗಳ ಸುದೀರ್ಘ ಆಟದ ಅನುಭವ ಅವರದ್ದು. ಈಗ 'ಕರ್ನಾಟಕ ಹಾಕಿ' ಕಾರ್ಯದರ್ಶಿ ಆಗಿರುವ ಅವರ ಈ ಸಂದರ್ಶನ ವಿಶ್ವಕಪ್ ಹಾಕಿ ಹಿನ್ನೆಲೆಯಲ್ಲಿ ಅವರ ಸೂಕ್ಷ್ಮ ಒಳನೋಟಗಳನ್ನು ಕಟ್ಟಿಕೊಡುತ್ತದೆ:

**ಈ ಸಲದ ವಿಶ್ವಕಪ್‌ನಲ್ಲಿ ಯಾವ ತಂಡ ಫೇವರಿಟ್, ಯಾಕೆ?** ಸಾಂಪ್ರದಾಯಿಕ ಆಟದಲ್ಲಿ ಪಳಗಿದ ಆಸ್ಟ್ರೇಲಿಯಾ, ನೆದರ್‌ಲ್ಯಾಂಡ್ಸ್ ಹಾಗೂ ಬೆಲ್ಜಿಯಂ ಮೇಲೆ ನನಗೆ ಕಣ್ಣು. ಈ ಮೂರೂ ತಂಡಗಳು ನನ್ನ ಫೇವರಿಟ್ಸ್. ಪೆನಾಲ್ಟಿಯಲ್ಲಿ ಅರ್ಜೆಂಟಿನಾ ಅಷ್ಟು ಉತ್ತಮವಾಗಿ ಆಡುವುದಿಲ್ಲ. ಒಂದು ವೇಳೆ ಆ ಸಮಸ್ಯೆಯಿಂದ ಹೊರಬಂದರೆ ಅದೂ ಪ್ರಬಲ ತಂಡವೇ ಹೌದು. ಆಟದ ಬೇರುಗಳನ್ನು ಉಳಿಸಿಕೊಂಡೂ ಬದಲಾಗುತ್ತಾ ಬಂದಿರುವ ಸಮರ್ಥ ತಂಡಗಳಿವು. ಮೊದಲಿನಿಂದಲೂ ಆಸ್ಟ್ರೇಲಿಯಾ, ನೆದರ್‌ಲ್ಯಾಂಡ್ಸ್ ಶಕ್ತಿಶಾಲಿಗಳು. ಈಗೀಗ ಬೆಲ್ಜಿಯಂ ಆಟದ ಮೇಲೆಯೂ ಚಿತ್ತ ಹರಿಯತೊಡಗಿದೆ.

**ಭಾರತ ತಂಡದ ಪರಿಸ್ಥಿತಿ ಈ ಸಲ ಹೇಗಿದೆ?** ಸುಮಾರು ಅಷ್ಟೆ; ಪರಿಣತರ ತಂಡ ಎನ್ನಲಾಗದು. ಸೆಮಿಫೈನಲ್‌ವರೆಗೆ ಹೋಗುವ ಸಾಧ್ಯತೆ ಇದೆ. ಕ್ವಾರ್ಟರ್‌ಫೈನಲ್ಸ್ ಪ್ರವೇಶಿಸುವುದರಲ್ಲಿ ನನಗೇನೂ ಅನುಮಾನವಿಲ್ಲ. ಕೊನೆಯ ನಾಲ್ಕು ತಂಡಗಳಲ್ಲಿ ಒಂದಾಗುವುದೂ ಸದ್ಯದ ಪರಿಸ್ಥಿತಿಯಲ್ಲಿ ಉತ್ತಮ ಎಂದೇ ಹೇಳಬೇಕು. ಸೆಮಿಫೈನಲ್‌ನಲ್ಲಿ ಚೆನ್ನಾಗಿ ಆಡಿದರೆ ತಂಡದ ಮಟ್ಟಿಗೆ ಅದು ದೊಡ್ಡ ಜಿಗಿತವೇ ಹೌದು.

**ಭಾರತ ಇರುವ 'ಪೂಲ್'ನಲ್ಲಿ ಬೆಲ್ಜಿಯಂ, ಕೆನಡಾ ಇವೆ. ಅವುಗಳಿಗೆ ಹೋಲಿಸಿ ನೋಡಿದರೆ ನಮ್ಮ ಸ್ಥಿತಿ ಹೇಗೆ?** ಬೆಲ್ಜಿಯಂ ಪ್ರಬಲ ಎಂದು ಈಗಾಗಲೇ ಹೇಳಿರುವೆ. ಕೆನಡಾ ಹೆಚ್ಚೇನೂ ಶಕ್ತಿಶಾಲಿ ತಂಡವಲ್ಲ. ಆರು ಪ್ರಮುಖ ತಂಡಗಳಲ್ಲಿ ಒಂದು ಎನಿಸಿಕೊಳ್ಳುವಷ್ಟು ಕಸುವು ಅದಕ್ಕಿಲ್ಲ. ಎಂಟರಿಂದ ಹನ್ನೆರಡರ ಪೈಕಿ